# ಶ್ರೀಮಾತೆ

ಮೂಲ ಬಂಗಾಳಿ : **ಆಶುತೋಷ್ ಮಿತ್ರ**

ಅನುವಾದ : **ಸ್ವಾಮಿ ಜ್ಞಾನಯೋಗಾನಂದ**

## ಭಾಗ ೧೬



**ಗಣೇಂದ್ರನಾಥ, ಆಶುತೋಷ್ ಮಿತ್ರ (ಈ ಕೃತಿಯ ಲೇಖಕರು), ನಳಿನಿ, ಶ್ರೀಮಾತೆ, ರಾಧು, ಲಕ್ಷ್ಮೀದೇವಿ**

ಅಷ್ಟರಲ್ಲಿ ರಾಧು ಅಲ್ಲಿಗೆ ಬಂದಳು. ಶ್ರೀಮಾತೆ ಅವಳಿಗೆ ಎರಡು ತಾಂಬೂಲ ತರಲು ಹೇಳಿದರು. ಆಕೆ ತಾಂಬೂಲ ತಂದು ಕೊಟ್ಟು, ಶ್ರೀಮಾತೆಯವರನ್ನು ತನ್ನೊಂದಿಗೆ ಕರೆದುಕೊಂಡು ಹೋಗಲು ಹಠ ಮಾಡಿದಳು. ಶ್ರೀಮಾತೆ, ''ತುಸು ಏಕಾಂತದಲ್ಲಿ ಕುಳಿತಿದ್ದೇನೆ. ನೀನು ಹೋಗು, ನಾನು ಸ್ವಲ್ಪಹೊತ್ತು ಬಿಟ್ಟು ಬರುತ್ತೇನೆ'' ಎಂದರು. ಆಕೆ ಕೋಪಿಸಿಕೊಂಡು ಹೋದಳು. ಆಗ ಶ್ರೀಮಾತೆ ಒಂದು ತಾಂಬೂಲವನ್ನು ಶಿಷ್ಯನಿಗೆ ಕೊಟ್ಟು, ಇನ್ನೊಂದನ್ನು ತಾನೇ ಮೆಲ್ಲುತ್ತ ಮತ್ತೆ ಹೇಳತೊಡಗಿದರು: ''ಹೇಳುತ್ತಾರೆ, 'ಮರಳಿ ಮರಳಿ ಬರುತ್ತೇನೆ ದುಃಖಗಳು ರಾಶಿ ರಾಶಿ, ಎಷ್ಟು ದಿನ ಯಾತನೆ ಸಹಿಸುವೆ?' ಅಂತ. ಇದೇನು ಬರೀ ಜೀವಗಳಿಗೆ ಮಾತ್ರವೆ? – ಠಾಕೂರರಿಗೂ ಅಲ್ಲವೆ! ಅದನ್ನೇ ಕುಳಿತುಕೊಂಡು ಯೋಚಿಸುತ್ತಿದ್ದೆ. ನಾನು ನೋಡುತ್ತೇನೆ, ಇದಕ್ಕೆ ಕೊನೆಯಿಲ್ಲ. ಎಂಥ ಕಷ್ಟ ಠಾಕೂರರದು! ಯಾರಿಗೆ ಇದು ಅರ್ಥವಾಗುವುದು?'' ನಾನೆಂದೆ: ''ಬರೀ ಠಾಕೂರರದೇನು? ನಿಮ್ಮದೂ ಕೂಡ ಅಲ್ಲವೆ?'' ಶ್ರೀಮಾತೆ ಹೇಳಿದರು, ''ಛಿ, ಇಂಥ ಮಾತನ್ನು ಆಡುವುದುಂಟೆ, ಪೆದ್ದು ಹುಡುಗ? ನೀನು ಓದಿಲ್ಲವೆ – 'ನೀನು ಯಂತ್ರಿ, ನಾನು ಯಂತ್ರ; ನೀನು ಮನೆಯೊಡೆಯ, ನಾನು ಮನೆ; ಹೇಗೆ ಮಾಡಿಸುತ್ತೀಯೋ, ಹಾಗೆ ಮಾಡುತ್ತೇನೆ' ಅಂತ? ಎಲ್ಲವೂ ಠಾಕೂರರೇ; ಠಾಕೂರರನ್ನು ಬಿಟ್ಟು ಬೇರೇನೂ ಇಲ್ಲ. ಒಂದೊಂದು ಬಾರಿ ಅನ್ನಿಸುವುದು, ಜೀವಿಗಳ ಸಾಲ ತೀರಿ ಹೋಗುವುದೇ ಇಲ್ಲವಲ್ಲ — ಅಂತ. ಮತ್ತೆ ಭಾವಿಸುತ್ತೇನೆ, ಈ ಸಲವಂತೂ ತೀರುವುದಿಲ್ಲ; ಏನೇ ಆದರೂ ತೀರುವುದಿಲ್ಲ ಅಂತ. ಜೀವಿಗಳೆಲ್ಲ ಅವರಿಗೇ ಸೇರಿದವು ತಾನೆ! ''

ನಾನು ಕೇಳಿದೆ: ''ಅದಕ್ಕೇ ಇರಬೇಕಲ್ಲವೆ, ಯಾರು ಮಂತ್ರ ದೀಕ್ಷೆಗಾಗಿ ಬರುತ್ತಾರೋ, ಅವರಿಗೆಲ್ಲ ಕೊಟ್ಟುಬಿಡುತ್ತೀರಿ?'' ಶ್ರೀಮಾತೆ ಹೇಳುತ್ತ ಹೋದರು, ''ಎಷ್ಟೊಂದು ದುಃಖ ದುಮ್ಮಾನಗಳನ್ನು ಅನುಭವಿಸಿ, ಎಷ್ಟೊಂದು ಬೇಗೆಗಳಲ್ಲಿ ಬೆಂದು ಒದ್ದಾಡುತ್ತ ಬರುತ್ತಾರೆ! ಅವರ ಬೇಗೆಯನ್ನು ಠಾಕೂರರಲ್ಲದೆ ಬೇರೆ ಯಾರು ಅಡಗಿಸುವರು? ಅವರೇ ಎಲ್ಲರ ನೋವುಗಳನ್ನು ನುಂಗುವವರು. ಯಾರು ಅವರ ಬೇಗೆಯನ್ನು ನೋಡಿ ಅವರಿಗಿಂತಲೂ ಹೆಚ್ಚಿನದನ್ನು ಅನುಭವಿಸುವರೋ ಅವರು ತಾನೇ ಆ ಬೇಗೆಯನ್ನು ಅರಿಯುವರು?''

ಒಳಗಿನಿಂದ ರಾಧು ಜೋರಾಗಿ ಕಿರುಚತೊಡಗಿದಳು. ಶ್ರೀಮಾತೆ, ''ಕುಳಿತುಕೋ, ರಾಧಿಗೆ ಊಟ ಕೊಟ್ಟು ಬರುತ್ತೇನೆ'' ಎಂದು ಹೇಳಿ ಹೊರಟುಹೋದರು. ಒಂದು ಸಲ ನನಗನ್ನಿಸಿತು, 'ಠಾಕೂರರಿಗೆ ಹೋಲಿಸಿದರೆ ಅವರಿಗಿಂತಲೂ ಹೆಚ್ಚಿನ ಕಷ್ಟವನ್ನು ನೀವು ಅನುಭವಿಸಬೇಕಾಯಿತು' ಎಂದು ಹೇಳಿಬಿಡುತ್ತೇನೆ, ಅಂತ. ಮತ್ತೆ ಭಾವಿಸಿದೆ, ಇಲ್ಲ ಅವರ ಭಾವಕ್ಕೆ ತಡೆಯುಂಟು ಮಾಡುವುದು ಒಳ್ಳೆಯದಲ್ಲ. ಏನು ಹೇಳುತ್ತಾರೋ ಹೇಳಲಿ, ನಾನು ಕೇಳುತ್ತ ಹೋಗುತ್ತೇನೆ ಎಂದುಕೊಂಡೆ.

ಶ್ರೀಮಾತೆ ಮರಳಿ ಬಂದು ಮತ್ತೆ ಹೇಳತೊಡಗಿದರು: ''ಹಾಂ, ಏನು ಹೇಳುತ್ತಿದ್ದೆ?'' ನಾನೆಂದೆ, ''ಠಾಕೂರರ ವಿಷಯ.'' ಅವರು ಹೇಳತೊಡಗಿದರು: ''ಒಂದು ಸಲ ಏನು ನೋಡಿದೆ, ಗೊತ್ತೆ? ನೋಡುತ್ತಿದ್ದೆ, ಠಾಕೂರರೇ ಎಲ್ಲವೂ ಆಗಿದ್ದಾರೆ ಎಂಬುದನ್ನು. ಯಾವ ಕಡೆ ನೋಡಲಿ, ಅತ್ತ ಠಾಕೂರರೇ ಇದ್ದಾರೆ – ಒಕ್ಕಣ್ಣನೂ ಠಾಕೂರರೆ, ಹೆಳವನೂ ಠಾಕೂರರೆ – ಠಾಕೂರರನ್ನು ಬಿಟ್ಟು ಇಲ್ಲ ಅಂತ. ಆಗ ನನಗರ್ಥವಾಯಿತು, ಅವರದೇ ಸೃಷ್ಟಿ , ಅವರೇ ಎಲ್ಲವೂ ಆಗಿದ್ದಾರೆ ಅಂತ. ಜೀವ ಯಾವುದೇ ಕಷ್ಟವನ್ನು ಅನುಭವಿಸುತ್ತಿಲ್ಲ , ಅವರೇ ಎಲ್ಲವನ್ನೂ ಅನುಭವಿಸುತ್ತಿದ್ದಾರೆ. ಅದಕ್ಕಾಗಿಯೇ, ಯಾರು ಬಂದು ಅಳುತ್ತಾರೋ ಅವರನ್ನೇ ಉದ್ಧಾರ

ಮಾಡಬೇಕಾಗಿದೆ. ಅವರದೇ ವಸ್ತುವಿಗೆ, ಅವರಿಗೋಸ್ಕರವೇ ಮಾಡುತ್ತೇನೆ!''

ಮತ್ತೆ ಹೇಳಿದರು: ''ಇವರೆಲ್ಲ ನಿದ್ದೆ ಮಾಡಲು ಹೇಳುತ್ತಾರೆ. ನಿದ್ದೆ ಇನ್ನೆಲ್ಲಿದೆ ಅಥವಾ ಎಲ್ಲಿಂದ ಬರುತ್ತದೆ? ನನಗನ್ನಿಸುತ್ತದೆ, ನಿದ್ದೆ ಮಾಡುವಷ್ಟು ಕಾಲ ಜಪ ಮಾಡಿದರೆ ಜೀವಿಗಳ ಕಲ್ಯಾಣ ವಾಗುತ್ತದೆ. ಒಂದೊಂದು ಬಾರಿ ನನಗನ್ನಿಸುತ್ತದೆ, ಇಷ್ಟು ಸಣ್ಣ ಶರೀರವಲ್ಲದೆ, ಬಹಳ ದೊಡ್ಡ ಒಂದು ಶರೀರವಿದ್ದಿದ್ದರೆ, ಆಗ ಎಷ್ಟೋ ಜೀವಿಗಳ ಕಲ್ಯಾಣವಾಗುತ್ತಿತ್ತಲ್ಲಾ ಅಂತ!''

ಮತ್ತೆ ಅವರೆಂದರು: '' ಒಂದು ಕಪ್ಪು ಇರುವೆ ಹೋಗುತ್ತಿತ್ತು, ರಾಧಿ ಅವುಗಳನ್ನು ಕೊಲ್ಲುತ್ತಿದ್ದಾಳೆ; ಏನು ನೋಡಿದೆ ಗೊತ್ತೇನು? ನೋಡಿದೆ, ಅದು ಇರುವೆಯಲ್ಲ – ಠಾಕೂರರು! ಠಾಕೂರರ ಅದೇ ಕೈ, ಕಾಲು, ಮುಖ, ಕಣ್ಣು, ಎಲ್ಲವೂ ಅವರೆ! ರಾಧಿಯನ್ನು ತಡೆದೆ – ಹಾಗೂ ಭಾವಿಸಿದೆ, ಇವುಗಳು ತಾನೇ ಠಾಕೂರರ ಎಲ್ಲ ಜೀವಿಗಳು? ನಾನು ಇನ್ನೇನು ಮಾಡಬಲ್ಲೆ, ಎಷ್ಟು ಜನರನ್ನು ನೋಡಿಕೊಳ್ಳಬಲ್ಲೆ? ಆದರೆ ಅವರು ಎಲ್ಲರ ಭಾರವನ್ನೂ ನನ್ನ ಮೇಲೆ ಹಾಕಿದ್ದಾರೆ! ಎಲ್ಲರನ್ನೂ ನೋಡಿಕೊಳ್ಳಲು ನನಗೆ ಸಾಧ್ಯ ವಿದ್ದರೆ, ಆಗ ನೋಡಿಕೊಳ್ಳುತ್ತಿದ್ದೆ!''

ದೇವಾಲಯದಿಂದ ಶಂಖ, ಗಂಟೆಗಳನ್ನು ಬಾರಿಸಿದ ಧ್ವನಿ ಕೇಳಿ ಬಂತು. ಶ್ರೀಮಾತೆ ಕನಸಿನಿಂದ ಎದ್ದವರಂತೆ ಏಳುತ್ತ ಹೇಳಿದರು, ''ಸಂಜೆಯಾಗಿ ಬಿಟ್ಟಿತು! ಠಾಕೂರರಿಗೆ ಸಂಧ್ಯಾರತಿ ಮಾಡುತ್ತೇನೆ. ಎಷ್ಟೊಂದು ಮಾತಾಡಿದೆ!'' ನಾನು ಉತ್ತರಿಸಿದೆ, ''ಅಮ್ಮಾ ಇಂದು ನೀವು ಆಡಿದ ಮಾತುಗಳೆಲ್ಲ ಕೇಳಬೇಕಾದ ವಿಷಯಗಳೆ!'' ಅವರು ನಗುತ್ತ ಕೇಳಿದರು, ''ಬರೆದಿಡುತ್ತಿದ್ದೀಯಾ, ಹೇಗೆ?'' ನಾನೆಂದೆ, ''ಹೌದಮ್ಮಾ, ನೀವು ಜಯರಾಮಬಾಟಿಯಲ್ಲಿದ್ದಾಗ, ನಾನು ಕಲ್ಕತ್ತೆಯಲ್ಲಿದ್ದರೆ, ಯಾವಾಗ ಸಮಯ ಸಿಗುವುದೋ ಆಗ ಇವ ನ್ನೆಲ್ಲ ನೋಡುತ್ತಿರುತ್ತೇನೆ.'' ಶ್ರೀಮಾತೆ ನಕ್ಕರು. ಅವರು ಹೊರ ಟಾಗ ಪ್ರಣಾಮ ಮಾಡಿದೆ. ಅವರು ಆಶೀರ್ವಾದ ಮಾಡಿದರು. ಹೋಗುವಾಗ ನಗುತ್ತ ಹೇಳಿದರು, ''ತಾಯಿ ಮತ್ತು ಮಗು, ತಾಯಿ ಮತ್ತು ಮಗು!'' ನಾನು ತಂಗಿದ್ದ ನ್ಯಾಯಾಲಯದ ಮನೆ ಯತ್ತ ಹೊರಟೆ. ನನ್ನ ಕಿವಿಗಳಲ್ಲಿ ಅದೇ ಮಾತು ಮೊಳಗುತ್ತಿತ್ತು, ''ತಾಯಿ ಮತ್ತು ಮಗು, ತಾಯಿ ಮತ್ತು ಮಗು!''

ನನ್ನ ಕೋಣೆಯಲ್ಲಿ ಸದ್ದಿಲ್ಲದೆ ಕುಳಿತು ನೋಟ್ಸ್ ಮಾಡಿ ಬರೆದುಕೊಳ್ಳುತ್ತಿದ್ದೆ. ಕೃಷ್ಣಲಾಲ್ ನನ್ನ ಹಿಂದಿನಿಂದ ಸದ್ದಿಲ್ಲದೆ ಬಂದು, ನಾನೇನು ಬರೆಯುತ್ತಿದ್ದೆ ಎಂಬುದನ್ನು ತಿಳಿಯಬಯಸಿ ದರು. ನಾನು ಅವರಿಗೆ ಹೇಳಲಾರೆ, ಅವರು ಬಿಡಲಾರರು. ಯಾರಿಗೂ ಇದನ್ನು ಹೇಳಬಾರದೆಂದು ಅವರಿಂದ ಮಾತು ತೆಗೆದುಕೊಂಡು, ಅವರಿಗೆ ನನ್ನ ನೋಟ್ಸ್ ಪುಸ್ತಕಗಳನ್ನು ಕೊಟ್ಟೆ. ಅದನ್ನು ಅವರು ಬಹಳ ಹೊತ್ತು ನೋಡಿ, ''ತಮ್ಮಾ, ನೀನು ಈ ಕೆಲಸವನ್ನು ಚೆನ್ನಾಗಿ ಮಾಡಿದ್ದೀಯೆ'' ಎಂದರು.

ರಾಮೇಶ್ವರ ಯಾತ್ರೆಗೆ ಭದ್ರಕ್ ಸ್ಟೇಷನ್‌ನಿಂದ ಮದ್ರಾಸ್ ಮೇಲ್ ಹಿಡಿದೆವು ಎಂದು ಆಗಲೇ ಹೇಳಿದೆ. ನಾನು ಬಹುಪಾಲು ಸಮಯವನ್ನು ಶ್ರೀಮಾತೆಯವರ ಗಾಡಿಯಲ್ಲಿಯೇ ಕಳೆಯ ಬೇಕಾಯಿತು. ಪುರಿಗೆ ಹೋಗುವುದಾಗಿ ಹೇಳಿದ ರಾಮ, ಸರಿ ಯಾದ ವೇಳೆಗೆ ಖುರ್ದಾ ರೋಡ್ ಸ್ಟೇಶನ್‌ನಲ್ಲಿ ಇಳಿದುಹೋದ. ರೈಲು ಮುಂದಕ್ಕೆ ಸಾಗಿತು.

ಪ್ರಾತಃಕಾಲ ರೈಲು ಪ್ರಸಿದ್ಧ ಚಿಲ್ಕಾ ಸರೋವರದ ತೀರದಲ್ಲೇ ಸಾಗಿತು. ಈ ಸರೋವರದಲ್ಲಿ ಎಲ್ಲಿ ನೋಡಿದರೂ ಬೆಳ್ಳಕ್ಕಿಗಳು ಸಾಲು ಸಾಲಾಗಿ ತಮ್ಮ ಗೂಡುಗಳಿಂದ ಹೊರಕ್ಕೆ ಮೈಚಾಚು ತ್ತಿದ್ದವು; ಕೆಲವೆಡೆ ಅವು ಆಹಾರವನ್ನು ಹುಡುಕಿ ಹಾರಾಡುತ್ತಿದ್ದವು; ಸಮೀಪದ ಬೆಟ್ಟಗಳಿಂದ ಒಂದು ಸಲ ಹಕ್ಕಿಗಳು ಹಾರಾಡುತ್ತ ಬಂದು ಸರೋವರದಲ್ಲಿ ಇಳಿಯುತ್ತಿದ್ದವು.

ಶ್ರೀಮಾತೆ ಈ ಅಪೂರ್ವ ದೃಶ್ಯವನ್ನು ನೋಡಿ, ಚಿಕ್ಕ ಹುಡುಗಿ ಯಂತೆ ಆನಂದದಿಂದ ನಮಗೆ ತೋರಿಸಿದರು. ಅಂತೆಯೇ ಅನೇಕ ನೀಲಕಂಠ ಪಕ್ಷಿಗಳನ್ನು(ಗರುಡ) ನೋಡಿ ಕೈಜೋಡಿಸಿ ನಮಸ್ಕರಿಸಿದರು. ಇರಲಿ, ರೈಲುಗಾಡಿ ಗುಡುಗುಡು ಸದ್ದು ಮಾಡುತ್ತ, ಎಂಟು ಗಂಟೆಯ ಹೊತ್ತಿಗೆ ಗಂಜಾಂ ಜಿಲ್ಲೆಯ ಬಹರಂಪುರ ಸ್ಟೇಶನನ್ನು ತಲುಪಿತು.

ಅಲ್ಲಿ ಶಶಿ ಮಹಾರಾಜರ ವ್ಯವಸ್ಥೆಯಂತೆ ಕೇಲ್ನಾರ್ ಕಂಪೆ ನಿಯ ಬಂಗಾಳಿ ಮ್ಯಾನೇಜರನು ಕೆಲವು ಮಂದಿ ಮದ್ರಾಸಿನ ಭಕ್ತರನ್ನು ಕರೆದುಕೊಂಡು, ನಮ್ಮನ್ನು ಆಹ್ವಾನಿಸಿದನು. ಅವರು ನಮ್ಮನ್ನು ಇಳಿಸಿ, ಮೊದಲೇ ತಿಳಿಸಿದ್ದ ಒಂದು ಮನೆಗೆ ಕರೆದು ಕೊಂಡು ಹೋದರು. ಅಲ್ಲಿ ಮೇಲೆ ಹೇಳಿದ ಮ್ಯಾನೇಜರ್ ಬಾಬು ಆಹಾರ, ವಿಶ್ರಾಂತಿ ಇತ್ಯಾದಿ ಎಲ್ಲ ವ್ಯವಸ್ಥೆಗಳನ್ನು ಮಾಡಿದ್ದ. ಆತ, ನಿರಾಡಂಬರ ವ್ಯಕ್ತಿಯಾಗಿದ್ದ. ಮಧ್ಯಾಹ್ನ ಶ್ರೀಮಾತೆಯವರ ದರ್ಶನ ಮಾಡಲು ಕೆಲವು ಮಂದಿ ಮದ್ರಾಸಿನ ಹಾಗೂ ಗಂಜಾಂ ನಿವಾಸಿಗಳಾದ ಭಕ್ತರು ಬಾಳೆಹಣ್ಣು, ತೆಂಗಿನ ಕಾಯಿಗಳೊಂದಿಗೆ ಬಂದರು. ಅಂದು ರಾತ್ರಿ ಅಲ್ಲೇ ತಂಗಿದ್ದು, ಮರುದಿನ ಬೆಳಿಗ್ಗೆ ಮತ್ತೆ ಮದ್ರಾಸ್ ಮೇಲ್ ಗಾಡಿಯನ್ನೇರಿದೆವು. ಹಗಲು ಹಾಗೂ ರಾತ್ರಿ ರೈಲಿನಲ್ಲೇ ಕಳೆದು, ಮರುದಿನ ಮಧ್ಯಾಹ್ನ ಮದ್ರಾಸನ್ನು ತಲುಪಿದೆವು.

ದಾರಿಯ ನಡುವೆ ಮಧ್ಯಾಹ್ನದ ಹೊತ್ತಿಗೆ ಪ್ರಸಿದ್ಧ ಆರೋಗ್ಯ ಕೇಂದ್ರವಾದ ವಾಲ್ಟೇರ್ ಬರುತ್ತದೆ. ಪರ್ವತದಲ್ಲಿ ಕಟ್ಟಡಗಳ ಸಾಲನ್ನು ನೋಡಿ ಶ್ರೀಮಾತೆ ಆನಂದಪಟ್ಟರು. ಅವರೆಂದರು, ''ನೋಡು, ನೋಡು; ನಿಜವಾಗಿಯೂ ಚಿತ್ರಗಳಂತಿವೆ.'' ರಾತ್ರಿ ಶ್ರೀಮಾತೆ ರೈಲಿನ ಕೆಳಗಿನ ಹಾಸಿಗೆಯಲ್ಲಿ ಮಲಗಲು ಒಪ್ಪಲಿಲ್ಲ. ಯಾಕೋ ಗೊತ್ತಿಲ್ಲ ; ಕೆಲವು ದಿನಗಳ ಮುನ್ನ ಒಂದು ಬಾರಿ ಅವರು ಅದೇ ರೀತಿ ಮಲಗಿದ್ದರು. ಗಾಢ ನಿದ್ರೆಯಲ್ಲಿ ಅವರ ಕೈ ಕಿಟಕಿಯ ಹೊರಗೆ ಚಾಚಿಕೊಂಡಿತ್ತು. ಆ ಕೈಯಲ್ಲೇ ಠಾಕೂರರ

ಕವಚವಿತ್ತು. ಠಾಕೂರರು ಕಾಣಿಸಿಕೊಂಡು ಅವರನ್ನು ಎಚ್ಚರಿಸಿದರು. ಅನಂತರ ಅವರು ಮೇಲಿನ ಹಾಸಿಗೆಯಲ್ಲೇ ಮಲಗ ಬಯಸಿದರು. ಅವರನ್ನು ಎತ್ತಿ ಅಲ್ಲಿ ಮಲಗಿಸಬೇಕಾಯಿತು. ಇಳಿಯಬೇಕಾದಾಗ, ಅವರನ್ನು ಇಳಿಸಬೇಕಾಗಿ ಬಂತು.

ಮದ್ರಾಸ್ ರೈಲ್ವೇ ಸ್ಟೇಶನ್ನಿನಲ್ಲಿ ಶಶಿ ಮಹಾರಾಜರು ಕೆಲವು ಮಂದಿ ಭಕ್ತರೊಂದಿಗೆ ಶ್ರೀಮಾತೆಯವರನ್ನು ಕರೆದುಕೊಂಡು ಹೋಗಲು ಬಂದಿದ್ದರು. ಅವರು ಮೂರು ಮೋಟಾರ್ ಗಾಡಿಗಳನ್ನು ತಂದಿದ್ದರು. ಶ್ರೀಮಾತೆ ಹಾಗೂ ನಾವು ಇಂದೇ ಮೊದಲ ಬಾರಿಗೆ ಮೋಟಾರ್ ಗಾಡಿಗಳನ್ನು ನೋಡಿದ್ದೆವು, ಮೊದಲ ಬಾರಿಗೆ ಅದನ್ನು ಹತ್ತಿ ಕುಳಿತೆವು. ಮದ್ರಾಸ್ ಮಠದ ಸಮೀಪ ಮೈಲಾಪುರ ಎಂಬ ಸ್ಥಳದಲ್ಲಿ ಎರಡಂತಸ್ತಿನ ಒಂದು ಮನೆಯನ್ನು ಶ್ರೀಮಾತೆಯವರಿಗಾಗಿ ಬಾಡಿಗೆಗೆ ತೆಗೆದುಕೊಂಡಿದ್ದರು. ನಾವು ಅಲ್ಲಿಗೆ ಹೋಗಿ, ಅಲ್ಲಿ ತಂಗಿದೆವು. ಸುಮಾರು ಒಂದು ತಿಂಗಳು ನಾವು ಅಲ್ಲೇ ಇದ್ದೆವು. ಶ್ರೀಮಾತೆ ಅಲ್ಲಿದ್ದಷ್ಟು ಕಾಲ, ಅವರ ಆದೇಶದಂತೆ ಶಶಿಮಹಾರಾಜ್ ಎರಡು ಹೊತ್ತು ಮಠದಲ್ಲಿ ಊಟಮಾಡದೆ, ಈ ಮನೆಯಲ್ಲಿ ನಮ್ಮೊಂದಿಗೆ ಊಟ ಮಾಡುತ್ತಿದ್ದರು.

ಶ್ರೀಮಾತೆ ಅಲ್ಲಿದ್ದಾಗ ಮಹಿಳಾ ವಿದ್ಯಾಲಯದ ಮಹಿಳೆಯರು ತಮಿಳು ಭಜನೆಗಳನ್ನು ಹಾಗೂ ಹೆಣ್ಣುಮಕ್ಕಳು ಪಿಟೀಲಿನೊದಿಗೆ ಅತ್ಯಂತ ಸುಲಲಿತವಾದ ಧ್ವನಿಯೊಂದಿಗೆ ಹಾಡಿದರು. ಪ್ರಾಯಶಃ ಪ್ರತಿದಿನವೂ ಸಾಯಂಕಾಲ ಶ್ರೀಮಾತೆಯವರನ್ನು ನಗರದಲ್ಲೆಲ್ಲ ಸುತ್ತಾಡಿಸಲು ಹೊರಗೆ ಕರೆದುಕೊಂಡು ಹೋಗುತ್ತಿದ್ದೆವು. ಒಂದು ದಿನ ಸಮುದ್ರತೀರಕ್ಕೆ ಹೋದೆವು. ಅಲ್ಲಿ ಸುತ್ತಾಡಲು ಹಾಗೂ ಕುಳಿತುಕೊಳ್ಳಲು ಒಳ್ಳೆಯ ವ್ಯವಸ್ಥೆಯಿದೆ. ಒಂದು ದಿನ ನಾವು ಹೊಸ ಮತ್ಸ್ಯಾಗಾರ(ಎಕ್ವೇರಿಯಂ)ವನ್ನು ನೋಡಲು ಹೋದೆವು. ಮತ್ಸ್ಯಾಗಾರದ ನಿರ್ಮಾಣಕಾರ್ಯ ಇನ್ನೂ ಪೂರ್ಣಗೊಂಡಿರಲಿಲ್ಲ. ಆದರೂ ಅಲ್ಲಿ ಆಗ ಹಲವು ಬಣ್ಣಗಳಿಂದ ಕೂಡಿದ, ಹಲವು ಆಕಾರದ ಸಮುದ್ರದ ಮೀನುಗಳನ್ನು ಸಂರಕ್ಷಿಸಲಾಗಿತ್ತು. ಒಂದು ದಿನ ಮೈಲಾಪುರದ ಶಿವಮಂದಿರ (ಕಪಾಲೀಶ್ವರ) ಹಾಗೂ ಇನ್ನೊಂದು ದಿನ ಟ್ರಿಪ್ಲಿಕೇನಿನ ಪಾರ್ಥಸಾರಥಿ ಮಂದಿರವನ್ನು ದರ್ಶನ ಮಾಡಿದೆವು. ಮದ್ರಾಸಿನಲ್ಲಿ ಶೈವ ಹಾಗೂ ವೈಷ್ಣವ ಸಂಪ್ರದಾಯದ ಈ ಎರಡು ದೇವಾಲಯಗಳು ಪ್ರಸಿದ್ಧವಾಗಿವೆ. ಒಂದು ದಿನ ಕೋಟೆ ನೋಡಲು ಹೋಗಿದ್ದೆವು. ಅದು ಭಾರತದಲ್ಲಿ ಬ್ರಿಟಿಷರ ಮೊದಲ ಕೋಟೆಯಾಗಿತ್ತು. ಇಲ್ಲಿ ಮೊದಲನೆಯ ರಿಕ್ಷಾಗಾಡಿಯನ್ನು ಕಾಣಬಹುದು. ಶ್ರೀಮಾತೆ ಅದನ್ನು ಒಂದು ದಿನ ಹತ್ತಿ ಕುಳಿತರು. ಇಲ್ಲಿ ಕುದುರೆ ಗಾಡಿಗಳೇ ಹೆಚ್ಚಾಗಿವೆ; 'ಬ್ರುಹಾಮ್ ಕಂಪಾಸ್' ಗಾಡಿ ಇಲ್ಲವೆಂದೇ ಹೇಳಬಹುದು. ಗಾಡಿ ಚಾಲಕರಿಗೆ ಹಿಂದಿ ಬಾರದು; ನಮಗೂ ತಮಿಳು ತಿಳಿಯದು. ಹೀಗಾಗಿ ಇಂಗ್ಲಿಷಿನಲ್ಲೇ ಮಾತನಾಡಬೇಕಾಯಿತು.

ಇಲ್ಲಿ ಅತ್ಯಂತ ಕೆಳಜಾತಿಯವರನ್ನು ಬಿಟ್ಟರೆ, ಬೇರೆ ಯಾವ ಜಾತಿಯವರೂ ತಂಬಾಕನ್ನು ಯಾವ ರೂಪದಲ್ಲೂ ಸೇವಿಸುತ್ತಿರಲಿಲ್ಲ.

ಶ್ರೀಮಾತೆಯವರಿಗೆ ಹಲ್ಲನ್ನು ಸ್ವಚ್ಛಗೊಳಿಸುವುದಕ್ಕಾಗಿ ಹೊಗೆಸೊಪ್ಪನ್ನು ಸಂಗ್ರಹಿಸಲು ಹೊರಟ ನಮಗೆ, ಅದು ಲಭಿಸದೆ ತುಂಬಾ ತೊಂದರೆಯಾಯಿತು. ಒಂದು ಅಂಗಡಿಯಲ್ಲಿ ಹೊಗೆಸೊಪ್ಪನ್ನು ನೋಡಿ, ಅದರ ಬೆಲೆಯನ್ನು ಕೇಳಿದರೆ, ಅದು ಹೊಗೆಸೊಪ್ಪಲ್ಲವೆಂದು ಅಂಗಡಿಯಾತ ಹೇಳಿದ. ಕೈಯಿಂದ ಅದರತ್ತ ತೋರಿಸಿದಾಗಲೂ ಅವನು ಅದನ್ನು ಮಾರಲಿಚ್ಛಿಸುತ್ತಿರಲಿಲ್ಲ. ಅದಕ್ಕೆ ಕಾರಣ ತಿಳಿದು, ಕೆಲವು ಎಲೆಗಳನ್ನು ತೆಗೆದುಕೊಂಡು ಹೋಗಲು ಮುಂದಾಗಿ, ಅದರ ಬೆಲೆಯನ್ನು ನೀಡಲು ಒಂದು ರೂಪಾಯಿ ಕೊಟ್ಟಾಗ, ಅವನು ಅದರ ಬೆಲೆಯನ್ನು ಕಳೆದು ಉಳಿದ ಹಣವನ್ನು ಹಿಂದಿರುಗಿಸಿದ.

ಇಲ್ಲಿ ಮದ್ರಾಸಿನ ವಿಷಯವಾಗಿ ಕೆಲವು ಸಂಗತಿಗಳನ್ನು ಹೇಳುವುದು ಅನುಚಿತವಾಗದು. ಕಲ್ಕತ್ತೆಗೆ ಹೋಲಿಸಿದರೆ, ಮದ್ರಾಸ್ ವಿಸ್ತೀರ್ಣದಲ್ಲಿ ದೊಡ್ಡದು. ಆದರೂ ಜನಸಂಖ್ಯೆ ಕಡಿಮೆಯಾದ್ದರಿಂದ ಎಲ್ಲೆಡೆ ಖಾಲಿ ಖಾಲಿ ಕಾಣಿಸುತ್ತದೆ. ಇಲ್ಲಿ ಹೈಕೋರ್ಟ್ ಹಾಗೂ ವಿಶ್ವವಿದ್ಯಾಲಯ ಇರುವುದರಿಂದ ತಮಿಳು, ತೆಲುಗು, ಕನ್ನಡವೇ ಮೊದಲಾದ ಕೆಲವು ಭಾಷೆಗಳೂ ಇಲ್ಲಿ ಪ್ರಚಲಿತವಾಗಿವೆ. ಆದರೂ ತಮಿಳು ಭಾಷೆಯೇ ಪ್ರಧಾನ. ಸಂಸ್ಕೃತವೂ ಬಹಳ ಪ್ರಚಲಿತವಾಗಿದೆ. ಬ್ರಾಹ್ಮಣರೇ ಮೊದಲಾದ ನಾಲ್ಕು ವರ್ಗಗಳ ಜನರನ್ನಿಲ್ಲಿ ಕಾಣಬಹುದು. ಆದರೂ ಎರಡು ವರ್ಗಗಳ ಜನರು ಇಲ್ಲಿ ಮುಖ್ಯ – ಬ್ರಾಹ್ಮಣರು ಹಾಗೂ ಅಬ್ರಾಹ್ಮಣರು. ಈ ಸೀಮೆಯಲ್ಲಿ ಜಾತಿವಿಚಾರ ಪ್ರಬಲವಾಗಿರುವುದನ್ನೂ ಕಾಣಬಹುದು. ಇಲ್ಲಿ ಕೇಳಿಬಂದದ್ದೇನೆಂದರೆ, ಬ್ರಾಹ್ಮಣರು ಆಹಾರ ಅಥವಾ ಅಡುಗೆ ಮಾಡುವುದನ್ನು ಯಾರಾದರೂ 'ಪರಯ' ಜನರು, ಅಥವಾ ಶೂದ್ರರು ಕಂಡರೆ, ಅವರು ಆ ಆಹಾರವನ್ನೆಲ್ಲ ಬಿಸುಟು, ಅಡುಗೆಮನೆಯನ್ನು ಸ್ವಚ್ಛಗೊಳಿಸಿ, ಸ್ನಾನಮಾಡಿ ಬಂದ ಮೇಲೆ ಮತ್ತೆ ಅಡುಗೆ ಮಾಡುವರಂತೆ. ಅದೇ ಮಹಾ ವಿಚಾರವಂತನಾದ ಬ್ರಾಹ್ಮಣ ಹಣೆಯ ಮೇಲೆ ತಮ್ಮ ಸಂಪ್ರದಾಯದ ಚಿಹ್ನೆಯನ್ನು ಧರಿಸಿಕೊಂಡು, ಬರಿಗಾಲಿನಲ್ಲಿ ನ್ಯಾಯಾಲಯಕ್ಕೆ ಹೋದ; ತಿಂಡಿಸಮಯವಾದರೆ ಅವನಿಗೆ ಶೂದ್ರ ಸೇವಕ 'ದಧ್ಯೋಧನ'(ಮೊಸರನ್ನ)ವನ್ನು ತೆಗೆದುಕೊಂಡು ಹೋದ – ಆತ ಯಾವುದೇ ಅಳುಕಿಲ್ಲದೆ ಅದನ್ನು ತಿನ್ನತೊಡಗಿದ. ಅನ್ನಕ್ಕೆ ಮೊಸರನ್ನು ಮಿಶ್ರ ಮಾಡಿದರೆ ಅದರಲ್ಲೇನೂ ದೋಷವಿಲ್ಲ! ಇನ್ನು, ಈ ಭಾಗದಲ್ಲಿ ವಿವಾಹ ಪದ್ಧತಿಗಳಲ್ಲಿ ಹೊಸತು ಕಂಡು ಬರುತ್ತದೆ — ವರನ ಮಾವನ ಮಗಳೇ ಉಳಿದೆಲ್ಲರಿಗಿಂತಲೂ ಯೋಗ್ಯ ಕನ್ಯೆ. ಅಂಥ ಕನ್ಯೆ ಇಲ್ಲದಿದ್ದರೆ ಮಾತ್ರ ಬೇರೆ ಹೆಣ್ಣನ್ನು ನೋಡುತ್ತಾರೆ. ಮದ್ರಾಸಿನ ಅಡುಗೆಯ ವಿಶೇಷತೆಯೇನೆಂದರೆ, ಬಹುಪಾಲು ಪಲ್ಯ ಪದಾರ್ಥಗಳಿಗೆ ಕೊಬ್ಬರಿ ಎಣ್ಣೆಯನ್ನು ಉಪ




ಯೋಗಿಸುತ್ತಾರೆ. ಈ ಕಡೆ ಹೇರಳವಾಗಿ ತೆಂಗಿನಕಾಯಿ ಬೆಳೆಯುವುದೇ ಇದಕ್ಕೆ ಕಾರಣವಿರಬೇಕು. ಹುಣಿಸೆ ಹಾಗೂ ಮೆಣಸಿನ ಕಾಯಿ ಇವುಗಳಿಂದ ತಯಾರಿಸಿದ ಮದ್ರಾಸಿನ 'ರಸಂ' ಒಂದು ಅದ್ಭುತ ಪದಾರ್ಥ. ಅಂತೆಯೇ ಅಕ್ಕಿಯಿಂದ ಮಾಡಿದ ಹಪ್ಪಳ (ದೋಸೆ)ವನ್ನು ನಾನು ಜೀವನದಲ್ಲಿ ಮೊದಲ ಬಾರಿಗೆ ಇಲ್ಲೇ ತಿಂದೆ. ಮದ್ರಾಸಿನಲ್ಲಿ ಇಂಗ್ಲಿಷ್ ವಿದ್ಯಾಭ್ಯಾಸ ಹೆಚ್ಚು ಪ್ರಚಾರದಲ್ಲಿದೆ. ಇಲ್ಲಿ ಚಳಿ ಇಲ್ಲವೆಂದೇ ಹೇಳಬಹುದು.

ಮದ್ರಾಸಿನಲ್ಲಿ ಒಬ್ಬಾಕೆ ಮಹಿಳೆ ಹಾಗೂ ಒಬ್ಬ ಭಕ್ತ ಶ್ರೀಮಾತೆಯವರಿಂದ ದೀಕ್ಷೆ ಪಡೆದರು. ಮದ್ರಾಸ್ ಮಠದಲ್ಲಿದ್ದ ಬ್ರಹ್ಮಚಾರಿ ಅಮೃತಾನಂದ ಎಂಬ ವಿದೇಶಿ ಕೂಡ ದೀಕ್ಷೆ ಪಡೆದ. ಇವರೆಲ್ಲ ಶ್ರೀಮಾತೆಯವರೊಂದಿಗೆ ಮಾತನಾಡುವಾಗ ನಾವು ದ್ವಿಭಾಷಿಗಳ ಕೆಲಸ ಮಾಡಬೇಕಾಯಿತು. ಆದರೆ ದೀಕ್ಷೆಯ ಸಮಯದಲ್ಲಿ ಮಂತ್ರ ಅಥವಾ ಕರಜಪ ಇತ್ಯಾದಿಗಳ ವಿಷಯದಲ್ಲಿ ಅವರಿಗೆ ನಮ್ಮ ಸಹಾಯ ಬೇಕಾಗಿರಲಿಲ್ಲ. ಎಲ್ಲರೂ ಶ್ರೀಮಾತೆಯವರ ಮಾತನ್ನು ಅರ್ಥಮಾಡಿಕೊಂಡರು. ಇದು ಗಮನಿಸಬೇಕಾದ ಸಂಗತಿ.

ರಾಮಲಾಲ್ ದಾದಾ (ಶ್ರೀರಾಮಕೃಷ್ಣರ ಅಣ್ಣನ ಮಗ) ರಾಮೇಶ್ವರ ದರ್ಶನ ಮಾಡುವ ಬಯಕೆಯಿಂದ ಕಲ್ಕತ್ತೆಯಿಂದ ಬಂದಿದ್ದರು. ಆದರೆ ನಿತಾಯಿಯ ತಾಯಿಗೆ ಅನಾರೋಗ್ಯವುಂಟಾದ್ದರಿಂದ, ನಾವು ತುಸು ಕಾಯಬೇಕಾಯಿತು. ಅವರ ಕಾಯಿಲೆ ವಾಸಿಯಾಗದ್ದರಿಂದ, ಅವರ ಸೇವೆಗಾಗಿ ವ್ಯವಸ್ಥೆ ಮಾಡಿ, ನಾವು ಎಸ್.ಆರ್.ರೈಲ್ವೆಯ ಎರಡನೇ ದರ್ಜೆಯಲ್ಲಿ ಕುಳಿತು ಯಾತ್ರೆ ಮಾಡಿದೆವು. ಗಾಡಿಗಳಲ್ಲಿ ಒಳ್ಳೆಯ ವ್ಯವಸ್ಥೆಯಿತ್ತು. ಸಣ್ಣ ಸಣ್ಣ ಕೋಣೆಗಳಿಂದ ಕೂಡಿದ್ದ ಆ ಗಾಡಿಯಲ್ಲಿ ಒಂದು ತುದಿಯಿಂದ ಇನ್ನೊಂದು ತುದಿಯವರೆಗೆ ಸಣ್ಣ ವರಾಂಡವಿತ್ತು. ಅದರಲ್ಲೊಬ್ಬ ರಕ್ಷಕ ಬೀಗಗಳೊಂದಿಗೆ ರಾತ್ರಿಹೊತ್ತು ಓಡಾಡುತ್ತ ಇರುತ್ತಿದ್ದ. ಯಾರಾದರೂ ಗಾಡಿಯನ್ನು ಏರಿದರೆ ರಕ್ಷಕನು ಕೋಣೆಯ ಬೀಗ ತೆಗೆದುಕೊಡುತ್ತಿದ್ದ. ಜಾಗ ಸಾಲದೆ ಹೋದರೆ ಇನ್ನೊಂದು ಗಾಡಿಯನ್ನು ತೋರಿಸಿಕೊಡುತ್ತಿದ್ದ. ಪ್ರತ್ಯೇಕ ಕೋಣೆಗಳಲ್ಲಿ ಒಂದರ ಮೇಲೆ ಇನ್ನೊಂದು ಸ್ಥಳ ಮಲಗಲು ಇರುತ್ತಿತ್ತು; ಅಲ್ಲಿ ಇನ್ನೊಬ್ಬರು ಮಲಗಬಹುದಾಗಿತ್ತು. ಇಬ್ಬರ ಸ್ಥಳದಲ್ಲೂ ಮೇಲ್ಭಾಗದಲ್ಲಿ ಸಣ್ಣ ಫ್ಯಾನ್ ಇರುತ್ತಿದ್ದವು. ಸ್ವಾಮಿ ರಾಮಕೃಷ್ಣಾನಂದರು ನಮ್ಮೊಂದಿಗೆ ಹೊರಟರು. ರಾತ್ರಿ ಹೊತ್ತು ನಾವು ಹೊರಟು, ಮರುದಿನ ಬೆಳಿಗ್ಗೆ ಮದುರೈ ತಲುಪಿದೆವು. ಅಂದು ಅಲ್ಲಿ ಒಬ್ಬ ಮುನಿಸಿಪಾಲಿಟಿ ಚೇರ್‌ಮ್ಯಾನ್ ಮದ್ರಾಸೀ ಭಕ್ತನ ಅತಿಥಿಯಾಗಿ ಉಳಿದುಕೊಂಡೆವು.

*(ಮುಂದುವರಿಯುವುದು)*

## ಉಪಾಸನೆ

''ಉಪಾಸನೆಯೆಂದರೆ, ಉಪಾಸನೆ ಮಾಡಬೇಕಾದ ವಸ್ತುಗಳನ್ನು ಶಾಸ್ತ್ರದಲ್ಲಿ ಹೇಳಿರುವಂತೆ ವಿಷಯವಾಗಿಸಿಕೊಂಡು, ಸಮೀಪಕ್ಕೆ ಬಂದು ಸೇರಿ, ತೈಲಧಾರೆಯಂತೆ ಒಂದೇ ಪ್ರತ್ಯಯವನ್ನು ಹರಿಸುತ್ತಾ ಬಹಳ ಹೊತ್ತು ಇರುವುದು. ಇದನ್ನೇ ಉಪಾಸನೆಯೆನ್ನುತ್ತಾರೆ.''

*— ಶ್ರೀಶಂಕರಾಚಾರ್ಯ (ಗೀತಾಭಾಷ್ಯ, ೧೨.೩)*